


### ಸಕಾಲಿಕ ಲೇಖನ

'ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಏನಾಗಿದೆ?' ಮಂಜುನಾಥ ಬೇದ್ರೆ ಅವರ ಮುಖಪುಟ ಲೇಖನ ಪರೀಕ್ಷೆಯ ಸಮಯದಲ್ಲಿ ಸಂದರ್ಭೋಚಿತವಾಗಿದೆ. ಸಂಗ್ರಹಯೋಗ್ಯ ಸಂಚಿಕೆ.

ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಸರಸ್ವತಿ ಶಂಕರ್, ಬೆಂಗಳೂರು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಸೌದಾಮಿನೀ ಪ್ರಭಾಕರ್, ಮೈಸೂರು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಎಸ್.ನಿತ್ಯ, ಮೂಡಬಿದರೆ/ ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಸಂತೇಬೆನ್ನೂರು ಫೈಜ್ನಟ್ರಾಜ್

### ಮೆಚ್ಚುಗೆ

'ಕಡಲ ತಡಿಯಲ್ಲಿ' ಇರ್ಷಾದ್ ಎಂ. ವೇಣೂರರ ಲೇಖನ ಮೆಚ್ಚುಗೆಯಾಯಿತು.

-ಅಬ್ದುಲ್ ವಹ್ಹಾಬ್ ಮುಲ್ಲಾ, ಗಂಗಾವತಿ/ ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಸೊಗಸಾದ ಕಥೆಗಳು

'ಕಾಗಿ ಶಕುನ' ಎಚ್.ಟಿ. ಪೋತೆ ಮತ್ತು 'ಆಸರೆ' ರಾಜಶೇಖರ ಗೌಡ ಕೊಟ್ನೂರು ಅವರ ಕಥೆಗಳು ಸೊಗಸಾಗಿ ಮೂಡಿಬಂದು ಸುಖ್ಯಾಂತದಲ್ಲಿ ಕೊನೆ ಗೊಂಡು ಮನಸ್ಸನ್ನು ಸಂತಸಪಡಿಸಿದವು.

-ಜಿ. ರಾಧಾಕೃಷ್ಣರಾವ್, ಬೆಂಗಳೂರು

### ಕಲ್ಬುರ್ಗಿ ಗಂಡುಭಾಷೆ

'ಕಾಗಿ ಶಕುನ' ಕಥೆ ಕಲ್ಬುರ್ಗಿ ಗಂಡು ಭಾಷಾದಾಗ ಭಾಳ ಚಲೋ ಬರ್ದಾರ. ಹಿಂಗ ನಮ್ಮ ಭಾಗದ ಆಡುಭಾಷೆಯೊಳಗ ಹೆಚ್ಚು ಕಥಿ ಪ್ರಕಟಿಸಿರಿ.

-ಪಂಡಿತರಾವ ಪಾಟೀಲ, ಸರಸಂಬಾ

### ಹಿಡಿಸಿದ ಕಥೆ

ಕೆ.ಕೆ.ಗಂಗಾಧರನ್ ಕನ್ನಡಕ್ಕೆ ತಂದಿರುವ 'ಕುಕ್ಕುಲಾಂಟಿ' ಮಲೆಯಾಳಿ ಕಥೆ ನನಗೆ ಹಿಡಿಸಿತು.

-ನಂದಾದೀಪ ಕಳಸಾಪುರ, ತೆಂಗಿನ ಮನೆ

### ದೇಶೀಯ ಭಾಷೆಯ ಪ್ರತೀಕ

ರಾಜಶೇಖರಗೌಡ ಕೊಟ್ನೂರು ಅವರ 'ಆಸರೆ' ಕಥೆ ದೇಶೀಯ ಭಾಷೆಯ ಸೊಗಡನ್ನು ಅನಾವರಣಗೊಳಿಸಿತು.

-ನಾಗರಾಜ ಬಣಕಾರ್, ಕೊಟ್ನೂರು

### ಅದ್ಭುತ ಬರಹ

ಫೆ. 16ರ ಸಂಚಿಕೆಯಲ್ಲಿ ನೇಪಾಳ ಪ್ರವಾಸದ ಬಗ್ಗೆ ಚಿತ್ರ-ಬರಹ ಅದ್ಭುತವಾಗಿ ಮೂಡಿಬಂದಿದೆ.

-ಗೀತಾ ಪಾಟೀಲ್ ಪೃಥ್ವೇಶ್ವರ, ಹರಪನಹಳ್ಳಿ

### ರಮ್ಯಾಗೆ ರಾಣಿ ಪಟ್ಟ ಬೇಕೆ?

ಕನ್ನಡ ಚಿತ್ರರಂಗದ ಹೀರೋಯಿನ್ ರಮ್ಯಾ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ಮೆಚ್ಚುಗೆ ಗಳಿಸಿದ್ದಾರೆ. ಅದೇನೋ ಸರಿ. ಆದರೆ 'ಸ್ಯಾಂಡಲ್‌ವುಡ್ ಕ್ವೀನ್' ಎನ್ನುವುದು ಅತಿಯಾಯಿತು.

ಚಾಲೆಂಜಿಂಗ್ ಎನ್ನುವ ಪಾತ್ರಗಳಲ್ಲಿ ಅಭಿನಯಿಸಿ ವಿಶ್ವಸುಂದರಿಯ ಪಟ್ಟ ಪಡೆದಿರುವ ಐಶ್ವರ್ಯ, ಪ್ರಿಯಾಂಕ ಚೋಪ್ರಾ, ಸುಶ್ಮಿತಾ ಸೇನ್, ಕತ್ರಿನಾ ಕೈಫ್ ಅಂತಹವರನ್ನೇ ಹಿಂದಿ ಚಿತ್ರರಂಗದಲ್ಲಿ 'ಬಾಲಿವುಡ್ ಕ್ವೀನ್' ಎಂದು ಕರೆದಿಲ್ಲ. ಅಂದ ಮೇಲೆ ರಮ್ಯಾಗೇಕೆ ಈ ಪಟ್ಟ? ಜಯಂತಿಗೆ ಅಭಿನಯ ಶಾರದೆ, ಕಲ್ಪನಾಗೆ ಮಿನುಗುತಾರೆ ಸೂಕ್ತವಾಗಿದ್ದವು. ಆದರೆ ರಮ್ಯಾಗೆ ಇಟ್ಟಿರುವ ಕಿರೀಟ ದೊಡ್ಡದಾಯಿತು!

ಡಾ.ಕೆ.ಪ್ರಭಾಕರ್, ಡಾ.ಗೀತಾ, ಈ.ಮೋಹನ್, ಬೆಂಗಳೂರು

### ನಕ್ಕು ಹಗುರಾಗುವುದೇ ಲೇಸು

'ಸುಧಾ'ದ ಕೆಲವು ಅಂಕಣಗಳು ಸಮುದ್ರ ಮಥನದಲ್ಲಿ ಈಚೆಗೆ ಹೆಚ್ಚು ಚರ್ಚೆ ಆಗುತ್ತಿರುವುದನ್ನು ನೋಡಿದರೆ ಓದುಗರು 'ಸುಧಾ' ಓದುವಿಕೆಯನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂದು ಅರ್ಥ. 'ನೀವು ಕೇಳಿದಿರಿ?' ವಿಭಾಗದಲ್ಲಿ ರಾಮ್ ಉತ್ತರಗಳಿಗೆ ಬರುತ್ತಿರುವ ಪ್ರತಿಕ್ರಿಯೆಯೇ ಇದಕ್ಕೆ ಸಾಕ್ಷಿ. ರಾಜಕೀಯ ವ್ಯಕ್ತಿಗಳನ್ನು ವಿಡಂಬನೆ ಮಾಡಿದರೆ ಅದಕ್ಕೆ ವ್ಯಗ್ರರಾಗುವ ಅಗತ್ಯವಿಲ್ಲ. ನಕ್ಕು ಹಗುರಾಗುವುದೇ ಇದಕ್ಕೆ ಪರಿಹಾರ. ದೇವೇಗೌಡರು ಸೇರಿದಂತೆ ಎಲ್ಲರ ಬಗೆಗೆ ಪ್ರಶ್ನೆ ಕೇಳುವ ಹಕ್ಕು ನಮಗೂ ಇದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಉತ್ತರಿಸುವ ಹಕ್ಕು ರಾಮ್ ಅವರಿಗೂ ಇದೆ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಹಾಸ್ಯಾಸ್ಪದ ಎಚ್ಚರಿಕೆ

ಚಂದ್ರಶೇಖರಯ್ಯ ಎಂಬುವರು ರಾಮ್ ಅವರಿಗೆ ಬರೆದಿರುವ ಎಚ್ಚರಿಕೆ ಹಾಸ್ಯಾಸ್ಪದವಾಗಿದೆ.

-ಬಿ.ಎಸ್. ರಮೇಶ್, ಬೆಂಗಳೂರು

### ಆಕ್ಷೇಪಣೆ ಸಲ್ಲದು

ಕೆಲವೊಂದು ಬಾರಿ ರಾಮ್ ಉತ್ತರ ಮೊನಚಾಗಿದ್ದರೂ, ಆಕ್ಷೇಪಣೆಯ ಮಟ್ಟಕ್ಕೆ ತೆಗೆದುಕೊಳ್ಳಬಾರದು. ಅಮೆರಿಕ, ಇಂಗ್ಲೆಂಡ್ ದೇಶಗಳಲ್ಲಿ ಅಧ್ಯಕ್ಷರಿಂದ ಹಿಡಿದು ಸಾಮಾನ್ಯರ ಬಗೆಗೂ ನೇರವಾದ ಹಾಸ್ಯ ಚಟಾಕಿ ಹಾರಿಸಿದರೂ ಅದನ್ನು ಯಾರೂ ಆಕ್ಷೇಪಿಸುವುದಿಲ್ಲ.

-ಶ್ರೀನಾಥ್ ಕೊನೇಟಿ, ಬೆಂಗಳೂರು

### ಭೇಷ್ ಕಾರ್ಮಿಕನ ಮಗನೆ!

'ಗಣಿ ಕಾರ್ಮಿಕನ ಮಗ ಕ್ರಿಕೆಟ್ ಪಟು' ಓಂಕಾರಮೂರ್ತಿ ಅವರ ಲೇಖನ ಓದಿ ಕಣ್ಣಂಚಿನಲ್ಲಿ ನೀರು ಬಂತು. ಅಭಿಮಾನ ಮೂಡಿ ಬಂತು.

-ರೇಣುಕಾ ಪಾಟೀಲ, ದಾವಣಗೆರೆ

### ಕಾದಂಬರಿಗೆ ಆಹ್ವಾನ

ಶ್ರೀಮತಿ ಶಾಂತಮ್ಮ ಬಸಯ್ಯ ಸಾವಿರಮಠ ಸ್ಮರಣೆಯ ಸಾವಿರಮಠ ಟ್ರಸ್ಟ್ 2011ರಲ್ಲಿ ಪ್ರಕಟವಾದ ಕಾದಂಬರಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಿದೆ.

ಪ್ರಥಮ ಮುದ್ರಣದ ಕೃತಿಗಳಿಗೆ ಮಾತ್ರ ಅವಕಾಶವಿದೆ. ಪ್ರಶಸ್ತಿ ಮೊತ್ತ ಹತ್ತು ಸಾವಿರ ರೂ. ಆಸಕ್ತ ಲೇಖಕರು ಕಾದಂಬರಿಯ ಮೂರು ಪ್ರತಿಗಳನ್ನು ಜೆ.ಬಿ. ಸಾವಿರಮಠ, ಅಧ್ಯಕ್ಷರು, ಸಾವಿರಮಠ ಟ್ರಸ್ಟ್, ಗೌಳಿಗಲ್ಲಿ, ಹಾವೇರಿ-581110 - ಈ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ 9448006117 ಸಂಪರ್ಕಿಸಿ

ಶ್ರೀ ರಾಮಕೃಷ್ಣ ಜ್ಯೋತಿಷ್ಯ ಕೇಂದ್ರ

FAMOUS ASTROLOGER IN BANGALORE
ಜ್ಯೋತಿಷ್ಯ ತಜ್ಞ ಎಂ.ಡಿ. ದೇವಾನಂದ್



ವಿಶ್ವ ಮನುಕುಲದ ಮಾಯೆಯಲ್ಲಿ ಹುಟ್ಟು ಮನುಷ್ಯನ ವರದಾನವಾದರೆ ಸಾವು ದೇವರ ಕೃಪಾನಿಧಿಯಂತೆ ಸಾಗಿದೆ. ಕಾಲಕಾಲಾಂತರಗಳಿಂದ ನಾವು ಮಾಡಿದ ಪಾಪ ಕರ್ಮಗಳಿಂದ ಜೀವನಕ್ಕೆ ನೆಮ್ಮದಿಯಿಲ್ಲದೆ ಮುಕ್ತಿ ಸಿಗದ ಶಕ್ತಿಯಾದಾಗ ನಮ್ಮ ಬದುಕಿಗೆ ಬೆಳಕಾಗಿ ಕಾಣುವುದೇ ವೇದಾಂತವೆಂಬ ಜ್ಯೋತಿಷ್ಯಮಾರ್ಗ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರ, ವಿದೇಶ ಪ್ರಯಾಣ, ಮದುವೆ ವಿಳಂಬ, ಸಂತಾನ, ಕೋರ್ಟ್‌ಕೇಸ್, ಪ್ರೇಮವಿಚಾರ, ಶತ್ರುಕಾಟ, ಸತಿಪತಿಕಲಹ, ಸ್ತ್ರೀ-ಪುರುಷ ವಶೀಕರಣ, ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಶಾಸ್ತ್ರೋಕ್ತ ಪದ್ಧತಿಯಿಂದ ಶೀಘ್ರ ಪರಿಹಾರ ಶತಸಿದ್ಧ.

ವಿಶೇಷ ಸೂಚನೆ: ಸಾಲಬಾಧೆ, ಶತ್ರುಕಾಟ, ವಶೀಕರಣ, ಮಾಟಮಂತ್ರ ನಿಮ್ಮ ಇಷ್ಟೇ ಕಠಿಣ ಸಮಸ್ಯೆಗಳಿಗೆ ಕಾತ್ಯಾಯಿನಿ ದೇವಿಯಿಂದ 11 ದಿನದಲ್ಲಿ ಶಾಶ್ವತ ಪರಿಹಾರಕ್ಕಾಗಿ ಸಂಪರ್ಕಿಸಿ:

11 ದಿನದಲ್ಲಿ ಶಾಶ್ವತ ಪರಿಹಾರ



ದೂರದ ಊರಿನವರಿಗೆ ಫೋನಿನಲ್ಲಿ ಹಾಗೂ ಪತ್ರದ ಮೂಲಕ ಸಲಹೆ ನೀಡುತ್ತಾರೆ. ಇವರನ್ನು ಒಮ್ಮೆ ನೇರವಾಗಿ ಭೇಟಿ ಮಾಡಿ ಅವರಿಗೆ ಸೂಕ್ತ ಹಾಗೂ ಶಾಶ್ವತ ಪರಿಹಾರ.

9591404064
9980588216

ನಂ. 142/1, ವ್ಯಾಸರಾಯರ ಮಠ ಸರ್ವೆಯರ್ ಸ್ಟ್ರೀಟ್, ವಿಜಯಬ್ಯಾಂಕ್ ಹತ್ತಿರ, ಬಸವನಗುಡಿ, ಬೆಂಗಳೂರು-04.